ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/ಹೆಚ್.ಆರ್.ಎಂ.ಎಸ್ 2/01/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 28/03/2024

# ಸುತ್ತೋಲೆ

**ವಿಷಯ:** HRMS 1 ತಂತ್ರಾಂಶದಿಂದ HRMS 2 ಗೆ Onboard ಆಗುತ್ತಿರುವ ಸಂಬಂಧ ಡಿ.ಡಿ.ಓ.ಗಳು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಕುರಿತು.

**ಉಲ್ಲೇಖ:** ಹೆಚ್.ಆರ್.ಎಂ.ಎಸ್ 2 ನಿರ್ದೇಶನಾಲಯ, ಆರ್ಥಿಕ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: FD-HRMS0H-1(MISC)/1/2021 ದಿನಾಂಕ: 25/03/2024

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಆಯ್ದ 10 ಇಲಾಖೆಗಳನ್ನು HRMS 1 ತಂತ್ರಾಂಶದಿಂದ HRMS 2 ತಂತ್ರಾಂಶಕ್ಕೆ Onboard ಮಾಡಲಾಗುತ್ತಿದ್ದು, ಅವುಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯು ಒಂದಾಗಿದ್ದು, ಪ್ರಾಯೋಗಿಕ ಯೋಜನೆಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದಾಗಿ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಪ್ರಸ್ತುತ ಬಳಕೆಯಲ್ಲಿರುವ HRMS 1 ತಂತ್ರಾಂಶದಲ್ಲಿನ ಡೇಟಾಬೇಸ್ ಅನ್ನು HRMS 2 ಗೆ ವರ್ಗಾಯಿಸಲು ಹಲವಾರು ನ್ಯೂನತೆಗಳು ಕಂಡುಬಂದಿದ್ದು, ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ. ಇಲಾಖಾ ವ್ಯಾಪ್ತಿಯ ಎಲ್ಲಾ ಡಿ.ಡಿ.ಓ ಗಳು ಇದರ ಬಗ್ಗೆ ವೈಯಕ್ತಿಕ ಗಮನ ಹರಿಸಿ ಅವುಗಳನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

1. ಎಲ್ಲಾ ಸರ್ಕಾರಿ ಅಧಿಕಾರಿ / ಸಿಬ್ಬಂದಿಗಳ ವೈಯಕ್ತಿಕ ಮಾಹಿತಿಗಳನ್ನು (Name, designation, date of birth, pay scale, group, date of entry into service, updation of GER number for gazetted employees, PAN number updation, Residential Address, Contact Number, Marital Status, Spouse Details, Qualification details, Family and dependant details along with correct date of birth, home town details, Nominee details etc., ) ಗಳನ್ನು ಪರಿಶೀಲಿಸಿ, ತಪ್ಪಿದಲ್ಲಿ ತುರ್ತಾಗಿ ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
2. ಎಲ್ಲಾ ಸರ್ಕಾರಿ ಅಧಿಕಾರಿ / ಸಿಬ್ಬಂದಿಗಳ ಸೇವಾ ವಹಿಯ (Departmental Exams, Probationary period clearance details, Increment/Promotion details, leave details, training details, suspension details if employee is or was under suspension, disciplinary details, transfer details etc.,) ಪೂರ್ಣ ಮಾಹಿತಿಯನ್ನು ಈ ಕೂಡಲೇ ಪರಿಶೀಲಿಸಿ, ತಪ್ಪುಗಳಿದ್ದಲ್ಲಿ ಸರಿಪಡಿಸಿಕೊಳ್ಳುವುದು.
3. ಎಲ್ಲಾ ಅಧಿಕಾರಿ / ಸಿಬ್ಬಂದಿಗಳ ರಜೆ ವಿವರಗಳನ್ನು ಕಡ್ಡಾಯವಾಗಿ ಪ್ರಸ್ತುತ ದಿನಾಂಕದವರೆಗೆ ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಪ್ಡೇಟ್ ಮಾಡುವುದು.
4. ಎಲ್ಲಾ ಪತ್ರಾಂಕಿತ ಅಧಿಕಾರಿಗಳ GER ಸಂಖ್ಯೆಯನ್ನು ಕೂಡಲೇ ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಪ್ಡೇಟ್ ಮಾಡುವುದು ಹಾಗೂ ಮಹಾಲೇಖಪಾಲರ ಕಛೇರಿಯಿಂದ latest leave title ಪಡೆದು ಪತ್ರಾಂಕಿತ ಅಧಿಕಾರಿಗಳ ರಜೆ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಪ್ಡೇಟ್ ಮಾಡಲು ಪ್ರಾಂಶುಪಾಲರ ಪತ್ರದೊಂದಿಗೆ AG's leave title ಅನ್ನು dce.hrms@gmail.com ಗೆ ಕಳುಹಿಸತಕ್ಕದ್ದು.

5. ಈಗಾಗಲೇ ಈ ಕಛೇರಿಯ ದಿನಾಂಕ: 11/03/2024ರ ಪರಿಚಲನಾ ಆದೇಶ ಸಂಖ್ಯೆ: ಕಾಶಿಇ/ಹೆಚ್.ಆರ್.ಎಂ.ಎಸ್/01/2021-22 ರಲ್ಲಿ ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ತಪ್ಪಾಗಿ ನಮೂದಾಗಿರುವ ಕೆ.ಜಿ.ಐ.ಡಿ ಪ್ರಥಮ ಪಾಲಿಸಿ ಸಂಖ್ಯೆಗಳುಳ್ಳ ಸರ್ಕಾರಿ ಅಧಿಕಾರಿ / ಸಿಬ್ಬಂದಿಗಳ ಪಟ್ಟಿ, ಜನ್ಮ ದಿನಾಂಕ ತಪ್ಪಾಗಿ ನಮೂದಾಗಿರುವ ಪಟ್ಟಿಯನ್ನು ನೀಡಲಾಗಿದ್ದು, ಕೆ.ಜಿ.ಐ.ಡಿ ಕಛೇರಿಯನ್ನು ಸಂಪರ್ಕಿಸಿ ಆದ್ಯತೆ ಮೇರೆಗೆ ಸರಿಪಡಿಸಿಕೊಳ್ಳತಕ್ಕದ್ದು.
6. ಎನ್.ಪಿ.ಎಸ್ ವ್ಯಾಪ್ತಿಗೊಳಪಡುವ ಸರ್ಕಾರಿ ಅಧಿಕಾರಿ / ಸಿಬ್ಬಂದಿಗಳ ಬ್ಯಾಕ್‌ಲಾಗ್ ವಂತಿಗೆ ಪಾವತಿ ಬಾಕಿಯಿದ್ದಲ್ಲಿ, ಈ ಕೂಡಲೇ ಅದನ್ನು ಸರಿಪಡಿಸಿಕೊಳ್ಳತಕ್ಕದ್ದು.

ಮೇಲೆ ತಿಳಿಸಲಾದ ಎಲ್ಲಾ ಅಂಶಗಳ ಕುರಿತು ಡಿ.ಡಿ.ಓ.ಗಳು ವೈಯಕ್ತಿಕ ಗಮನ ಹರಿಸಿ ತಮ್ಮ ಕಛೇರಿ ವ್ಯಾಪ್ತಿಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಮರುಪರಿಶೀಲಿಸಿ, ಅಗತ್ಯ corrections ಗಳನ್ನು **ದಿನಾಂಕ: 15/04/2024** ರೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸತಕ್ಕದ್ದು. ಒಂದು ವೇಳೆ ನಿರ್ಲಕ್ಷ್ಯತೆ ತೋರಿದ್ದಲ್ಲಿ, ನ್ಯೂನತೆಗಳಿರುವ ಅಧಿಕಾರಿ / ಸಿಬ್ಬಂದಿಗಳ ಡೇಟಾಬೇಸ್ HRMS 2 ಗೆ ವರ್ಗಾವಣೆಗೊಳ್ಳದೇ, HRMS 1 ರಲ್ಲಿ ವೇತನ ಜನರೇಟ್ ಮಾಡಲು ಅವಕಾಶವಿರುವುದಿಲ್ಲ ಎಂಬ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತಾ, ಇದಕ್ಕೆ ಆಯಾ ಡಿ.ಡಿ.ಓ ಗಳು ನೇರ ಜವಾಬ್ದಾರರಾಗಿರುತ್ತಾರೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

<u>ಇವರಿಗೆ:-</u>

1. ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಎಲ್ಲಾ ಪ್ರಾದೇಶಿಕ ಜಂಟಿನಿರ್ದೇಶಕರುಗಳು ಹಾಗೂ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.

<u>ಪ್ರತಿಯನ್ನು:</u>

1. ಯೋಜನಾ ನಿರ್ದೇಶಕರು, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ 2.0 ನಿರ್ದೇಶನಾಲಯ, ಆರ್ಥಿಕ ಇಲಾಖೆ, ಕೆ.ಪಿ.ಸಿ.ಎಲ್ ಕಟ್ಟಡ, 5ನೇ ಮಹಡಿ, ಬೆಂಗಳೂರು 560001 – ಮಾಹಿತಿಗಾಗಿ
2. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಸುತ್ತೋಲೆಯನ್ನು ಪ್ರಕಟಿಸಲು.
3. ಕಛೇರಿ ಪ್ರತಿ.